ಸಹಕಾರ ಸಂಘಗಳಲ್ಲಿ ನಿರ್ದೇಶಕರುಗಳ ಚುನಾವಣೆ

೪೭ (೭೦) ಶ್ರೀ ಕೆ. ಎಸ್. ಕಾಳಮರಿ ಗೌಡ (ಪಿರಿಯಾಪಟ್ಟಣ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಹಕಾರಿ ಸಂಘಗಳಲ್ಲಿ ಚುನಾವಣೆಗಳಾದ ಮೇಲೆ ಚುನಾವಣೆ ಆದ ನಿರ್ದೇಶಕರುಗಳ ಆಯ್ಕೆಗೆ ತಡೆಯಾಜ್ಞೆ ಕೊಡುವುದಕ್ಕೆ ಅವಕಾಶವಿದೆಯೆ ?

ಆ) ಹುಣಸೂರು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿಗೆ ತಡೆಯಾಜ್ಞೆ ನೀಡಿರುವುದು ನಿಜವೇ ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು)—

ಅ) ಸಹಕಾರಿ ಸಂಘಗಳ ಕಾಯ್ದೆ ಕಲಮು ೭೦ರ ಪ್ರಕಾರ ಅರ್ಜಿದಾರರು ಸಲ್ಲಿಸುವ ತಕರಾರು ಅರ್ಜಿಗಳ ಮೇಲೆ ಸಹಕಾರ ಕಾಯ್ದೆ ಕಲಮು ೭೧(೩)ರ ಪ್ರಕಾರ ವ್ಯಾಜ್ಯ ಕಾಲೀನ ಆದೇಶ (ಇಂಟರ್ ಲೋಕೆಟರಿ ಆರ್ಡರ್) ನೀಡಲು ಅವಕಾಶ ಉಂಟು.

ಆ) ಹೌದು.

ಶ್ರೀ ಕೆ. ಎಸ್. ಕಾಳಮರಿಗೌಡ.—ಹುಣಸೂರು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿಗೆ ಒಂದಕ್ಕೆ ಸಂಬಂಧಪಟ್ಟಂತೆ ಈ ಕಾನೂನನ್ನು ತೆಗೆದುಕೊಂಡಿದ್ದೀರೋ ಅಥವಾ ಎಲ್ಲದಕ್ಕೂ ಇದೇ ಕಾನೂನನ್ನು ಅನುಸರಿಸಿದ್ದೀರೋ ? ಚುನಾವಣೆಯಾದ ಮೇಲೆ ತಡೆಯಾಜ್ಞೆ ಕೊಡುವುದು ಯಾವ ನ್ಯಾಯ ? ಚುನಾವಣೆಯಾದ ಮೇಲೆ ತಡೆಯಾಜ್ಞೆಯನ್ನು ಕೊಟ್ಟಿರುವುದನ್ನು ಎಲ್ಲೂ ನೋಡಿಲ್ಲ. ಚುನಾವಣೆಯಾದ ಮೇಲೂ ತಡೆಯಾಜ್ಞೆಯನ್ನು ಕೊಡುವುದಕ್ಕೆ ಇದ್ದಂತಹ ಪ್ರಮೇಯವಾದರೂ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ ?

ಶ್ರೀ ಆರ್. ಎಲ್. ಜಾಲಪ್ಪ.—ಸಹಕಾರಿ ಸಂಘಗಳ ಕಾಯ್ದೆ ಕಲಮು ೭೦ರ ಪ್ರಕಾರ ದಾವೆ ಹೂಡಿದಾಗ, ಸೆಕ್ಷನ್ ೭೧ (೩)ರ ಪ್ರಕಾರ ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಟೇ ಆರ್ಡರ್‌ನ್ನು ಕೊಡುವ ಅಧಿಕಾರ ಉಂಟು. ಆದರೆ ಹೈಕೋರ್ಟಿನಲ್ಲಿ ಹಾಗೂ ಸುಪ್ರೀಂ ಕೋರ್ಟಿನಲ್ಲಿ ಅದಂತಹ ತೀರ್ಪಾನ ಏನಿದೆ ಎಂದರೆ, ಸಾಧ್ಯವಾದಷ್ಟು ಇಂತಹದ್ದರಲ್ಲಿ ತಡೆಯಾಜ್ಞೆಯನ್ನು ಕೊಡಬಾರದೆಂದೂ ಇದೆ. ಕೊಟ್ಟಿರುವುದು ಸರಿಯೋ, ತಪ್ಪೋ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಆಂತೂ ಸ್ಟೇ ಆರ್ಡರನ್ನು ಕೊಟ್ಟಿದ್ದಾರೆ. ಆದರೆ ಏತನ್ಮಧ್ಯೆ ಟ್ರಿಬ್ಯುನಲ್‌ಗೆ ಸೋಗಿ ಸ್ಟೇ ವೆಕೇಟ್ ಆಗಿದೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಇಡೀ ರಾಜ್ಯದಲ್ಲಿರುವ ಎಷ್ಟು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಈ ರೀತಿ ಮಾಡಿದ್ದೀರಿ ?

ಅಧ್ಯಕ್ಷರು.—ಇದು ಬಹಳ ಜನರಲ್ ಆಗಿ ಕೇಳಿದಂತಹ ಪ್ರಶ್ನೆಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಇದೇ ರೀತಿ ಬೇರೆ ಯಾವುದಾದರು ಬ್ಯಾಂಕಿಗೆ ತಾವು ಆದೇಶವನ್ನು ಕೊಟ್ಟಿದ್ದೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಚುನಾವಣೆಯಾದ ನಂತರವೂ ಸ್ಟೇ ಎಂದೂ ಕೊಡುವುದಿಲ್ಲ. ಇರ ತಕ್ಕ ಕಾನೂನಿನಲ್ಲಿ ಲೋಪ ಇದೆ. ಇದರ ಬಗ್ಗೆ ತಿದ್ದುಪಡಿಯನ್ನು ತರುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ.—ಅದರ ಬಗ್ಗೆ ವಾಖ್ಯಾನ ಬೇಕಾಗಿಲ್ಲ. ಅಂತೂ ಡಿ.ಆರ್.ಸಿ.ಎಸ್. ಸ್ಟೇಯನ್ನು ಕೊಟ್ಟಿದ್ದರು. ನಂತರ ಅದು ಟ್ರಿಬ್ಯುನಲ್‌ಗೆ ಹೋಗಿ ವೆಕೇಟ್ ಆಗಿದೆ. ಈ ಆಕ್ಟ್‌ನಲ್ಲಿ ತಿದ್ದುಪಡಿಯಾಗಬೇಕಾದುದು ಬೇಕಾದಷ್ಟು ಇದೆ. ತಿದ್ದುಪಡಿಗಳನ್ನು ಮಾಡಬೇಕಾದರೆ ಅದಕ್ಕೆ ತಮ್ಮ ಸಹಕಾರ ಬೇಕು. ಅದನ್ನು ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಮಾಡ ಬೇಕಾಗಿದೆ. ಅದನ್ನು ಸದ್ಯದಲ್ಲೇ ತಮ್ಮ ಮುಂದೆ ತರುತ್ತಿದ್ದೇವೆ. ವಿರೋಧ ಪಕ್ಷದವರು ಇದರಲ್ಲಿ ಸಹಕರಿಸಬೇಕು.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೪೮(೭೭) ಸದಸ್ಯರು ಹಾಜರಿರಲಿಲ್ಲ.